
# ಸೀರ್ ಶಾರ್ಟ್ಸ್

***ನೀವು ನಿಮ್ಮ ಮಗುವಿಗೆ ಸ್ಟೈಲಿಶ್ ಶಾರ್ಟ್ಸನ್ನು ಹೊಲೆಯಲು ಇಚ್ಚಿಸುವಿರಾದರೆ ಈವೀಡಿಯೋ ನಿಮಗಾಗಿ.***











**ವಸ್ತುಗಳ ವಿವರಳ ವಿವರ**

45 ಇಂಚು ಅಗಲವಿರುವ 1 ಮೀಟರ್ ಮೃದುವಾದ ಕಾಟನ್ ಬಟ್ಟೆ
**www.ushasew.com** ನಿಂದ ಡೌನ್ಲೋಡ್ ಮಾಡಿಕೊಂಡಿರುವ ಸೀರ್ ಶಾರ್ಟ್ಸ್ ನ ಟೆಂಪ್ಲೇಟ್
ಸ್ಕೇಲ್
1 ಇಂಚು ಬ್ರಾಡ್ ಎಲಾಸ್ಟಿಕ್
ಮ್ಯಾಚಿಂಗ್ ದಾರ
ಫ್ಯಾನ್ಸಿ ಬಟನ್‌ಅನ್ನು
ವಾಟರ್ ಎರೇಸಬಲ್ ಮಾರ್ಕರು
ಕತ್ತರಿ
ಮತ್ತು ಪಿನ್ ಗಳು

ಈ ವೀಡಿಯೋದಲ್ಲಿ ನೀವು ಪೀಸಸ್ಸನ್ನು ಶಾರ್ಟ್ಸ್ ಟೆಂಪ್ಲೇಟ್ ಸಹಾಯದಿಂದ ಕಟ್ ಮಾಡುವುದು, ಕ್ರಾಚ್ ಏರಿಯಾವನ್ನು ಹೊಲೆಯುವುದು,ಇನ್ನರ್ ಮತ್ತು ಸೈಡ್ ಸೀಮನ್ನು ಹೊಲೆಯುವುದು, ವೈಸ್ಟ್ ಬ್ಯಾಂಡನ್ನು ಹೊಲೆಯುವುದು ಎಲಾಸ್ಟಿಕನ್ನು ಹಾಕುವುದು ಮತ್ತು ಅಂಚನ್ನು ಹೆಮ್ ಮಾಡುವುದನ್ನು ಕಲೆಯುವಿರಿ.


## ಹಂತ 1 : ಟೆಂಪ್ಲೇಟ್ ಮಾರ್ಕಿಂಗ್ ಮತ್ತು ಕಟ್ಟಿಂಗ್

ನಿಮಗಿಷ್ಟವಾದ ಘಾಡ ಬಣ್ಣದ ಬಟ್ಟೆಯನ್ನು ತೆಗೆದುಕೊಳ್ಳಿ, ಬಟ್ಟೆಯನ್ನು ಇಲ್ಲಿ ತೋರಿಸಿರುವಂತೆ ಉದ್ದವಾಗಿ ಮಡಚಿ, ಪ್ರಿಂಟ್ ಇಲ್ಲದಿರುವ ಕಡೆ ನಿಮ್ಮನ್ನು ನೋಡುವಂತಿರಬೇಕು. **www.ushasew.com** ನಿಂದ ಡೌನ್ಲೋಡ್ ಮಾಡಿಕೊಂಡಿರುವ ಟೆಂಪ್ಲೇಟನ್ನು ಬಟ್ಟೆಯ ಮೇಲಿಡಿ. ನಾವು ಹಿಂಭಾಗದ ಟೆಂಪ್ಲೇಟಿನಿಂದ ಪ್ರಾರಂಭಿಸಿ ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ನಂತರ ನಾವು ಮುಂಭಾಗದ ಟೆಂಪ್ಲೇಟನ್ನು ಇಟ್ಟು ಅದನ್ನು ಸರಿಯಾಗಿ ಪಿನ್ ಮಾಡಬೇಕು. ಇದಾದ ನಂತರ ನಾವು ಎರಡೂ ಟೆಂಪ್ಲೇಟನ್ನು ಮಾರ್ಕಿಂಗ್ ಪೆನ್ ಸಹಾಯದಿಂದ ಟ್ರೇಸ್ ಮಾಡಿ, ನಂತರ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಟ್ರೇಸ್ ಮಾಡಿರುವುದರ ಮೇಲೆ ಕತ್ತರಿಸಿ. ಹುಷಾರಾಗಿ ಎರಡೂ ಪೀಸಸ್ಸನ್ನು ಕತ್ತರಿಸಿ ಅದನ್ನು ಒಂದರ ಪಕ್ಕದಲ್ಲಿ ಇನ್ನೊಂದನ್ನು ಇಡಬೇಕು. ನಿಮ್ಮ ಹತ್ರ 4 ಪೀಸಸ್ ಇರಬೇಕು.

ಹಂತ 2 : ಕ್ರಾಚ್ ಎರಿಯಾವನ್ನು ಹೊಲೆಯುವುದು



ಈಗ ನಾವು ಕ್ರಾಚ್ ಎರಿಯಾವನ್ನು ಹೊಲೆದು ಅದನ್ನು ಒಂದಾಗಿ ಸೇರಿಸೋಣ. ಬಟ್ಟೆಯನ್ನು ಊಷಾ ಜನೋಮ್ ವಂಡರ್ ಸ್ಟಿಚ್ ಸೀವಿಂಗ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ಈಗ ಪ್ರೆಸ್ಸರ್ ಫುಟ್ ಗೆ ಬಟ್ಟೆಯನ್ನು ಅಲೈನ್ ಮಾಡಿ. ಸ್ಟಿಚ್ ಸೆಲೆಕ್ಟರ್ ಡಯಲನ್ನು **A** ಗೆ ಮತ್ತು ಹೊಲಿಗೆಯ ಉದ್ದವನ್ನು 2.5 ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಸ್ವಲ್ಪ ಹೊತ್ತು ಹೊಲಿದ ನಂತರ ಹೊಲಿಗೆಯನ್ನು ಭದ್ರಗೊಳಿಸಲು ರಿವರ್ಸ್ ಹೊಲಿಗೆ ಹಾಕಿ. ಹಾಗೆ ಹೊಲೆಯುತ್ತಾ ಕೊನೆಯನ್ನು ತಲಪುವವರೆಗೂ ಹೊಲೆಯಿರಿ. ದಾರವನ್ನು ಕತ್ತರಿಸಿ ಮತ್ತು ಹಿಂಬದಿಯ ಬಟ್ಟೆಗೆ ಕ್ರಾಚನ್ನು ಹೊಲೆಯಿರಿ. ಶುರುವಿನಲ್ಲಿ ಮತ್ತು ಅಂತ್ಯದಲ್ಲಿ ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ.



## ಹಂತ 3 : ಸೈಡ್ ಮತ್ತು ಇನ್ನರ್ ಸೀಮನ್ನು ಎರಡೂ ಬದಿಯನ್ನು ಸೇರಿಸಲು ಹೊಲೆಯುವುದು














ನೀವು ಹೊಲೆದಿರುವ ಪೀಸ್ ಗಳು ನೋಡಲು ಹೀಗೆ ಕಾಣಬೇಕು. ಈಗ ಮುಂಭಾಗವನ್ನು ಹಿಂಭಾಗದ ಮೇಲಿಡಿ. ಬಲ ಭಾಗ ಬಲ ಭಾಗವನ್ನು ನೋಡುವಂತಿರಬೇಕು. ಈಗ ಸೈಡ್ ಮತ್ತು ಇನ್ನರ್ ಸೀಮನ್ನು ಹೊಲೆಯೋಣ. ಇಲ್ಲಿ ತೋರಿಸಿರುವಂತೆ ಇನ್ನರ್ ಸೀಮನ್ನು ಪಿನ್ ಮಾಡಿ. ಇದು ಮುಗಿದ ನಂತರ ಇನ್ನರ್ ಸೀಮನ್ನು ಹೊಲೆಯಿರಿ. ಮತ್ತು ಹೊಲೆಯುವಾಗ ಪಿನ್ಗಳನ್ನು ತೆಗೆಯಿರಿ. ಇದು ಮುಗಿದ ಮೇಲೆ ದಾರವನ್ನು ಕತ್ತರಿಸಿ ಮತ್ತು ಸೈಡ್ ಸೀಮ್ಗೆ ಮುಂದುವರೆಯಿರಿ. ಅಂತ್ಯವನ್ನು ತಲಪುವವರೆಗೂ ಹೊಲೆಯುತ್ತಾ ಹೋಗಿ. ಅನಂತರ ಇನ್ನೊಂದು ಕಡೆಯನ್ನು ಹೊಲೆಯಲು ಪ್ರಾರಂಭಿಸಿ.

ನಂತರ ನಮ್ಮ ಪಟ್ಟಿಯಲ್ಲಿ ಜಿಗ್ ಜಾಗ್ ಹೊಲಿಗೆಯನ್ನು ಹಾಕಿ ಫ್ರೇಡ್ ಎಡ್ಜ್ಸನ್ನು ತಡೆಯುವುದು ಮತ್ತು ಸೀಮನ್ನು ನೀಟಾಗಿ ಫಿನಿಷ್ ಮಾಡುವುದು. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು **C** ಗೆ ಇಟ್ಟು ಹೊಲಿಗೆಯ ಉದ್ದವನ್ನು 1.5 ಗೆ ಸೆಟ್ ಮಾಡಿ ಸೈಡ್ ಮತ್ತು ಇನ್ನ್ ಸೀಮನ್ನು ಹೊಲೆಯಲು ಪ್ರಾರಂಭಿಸಿ. ಇದು ಪುನರಾವರ್ತನೆ ಅನಿಸಬಹುದು ಆದರೆ ಇದು ತುಂಬಾ ಮುಖ್ಯವಾದ ಹಂತ.

## ಹಂತ 4 : ವೈಸ್ಟ್ ಲೈನನ್ನು ತಯಾರಿಸಿ ಬಾಟಮನ್ನು ಹೆಮ್ ಮಾಡುವುದು










ಶಾರ್ಟ್ಸನ್ನು ಒಳಗಿಂದ ಹೊರಕ್ಕೆ ತಿರುಗಿಸಿ ವೈಸ್ಟ್ ಲೈನನ್ನು ¼ ಇಂಚು ಮಡಚಿ ಐರನ್ ಮಾಡಿ. ಮತ್ತೆ ಅದನ್ನು 11/4 ಇಂಚು ಮಡಚಿ. ಇದು ಮಡಿಕೆಯನ್ನು ಜಾಗದಲ್ಲಿಡಲು ಸಹಾಯವಾಗುತ್ತದೆ ಹಾಗು ಹೊಲೆಯಲು ಸುಲಭವಾಗುತ್ತದೆ. ಪೂರ್ತಿ ವೈಸ್ಟ್ ಲೈನಿಗೆ ಹೀಗೆ ಮಾಡಿ. ಇದೇ ವಿಧಾನವನ್ನು ನಾವು ಕಾಲಿನ ಭಾಗದ ಹೆಮ್ ಲೈನಿಗೂ ಪುನರಾವರ್ತಿಸಬೇಕು. ಕಾಲು ಇಂಚು ಮಡಚಿ ಅದರ ಮೇಲೆ ಐರನ್ ಮಾಡಿ. ನಂತರ ಅದನ್ನು ಮತ್ತೆ 11/4 ಇಂಚು ಮಡಚಿ ಐರನ್ ಮಾಡಿ. ಇದನ್ನು ಎರಡೂ ಕಾಲಿನ್ ಭಾಗಕ್ಕೆ ಹೀಗೆ ಮಾಡಿ.

ಇದಾದ ನಂತರ ಬಟ್ಟೆಯನ್ನು ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು A ಗೆ ಇಟ್ಟು ನೇರ ಹೊಲಿಗೆಗಾಗಿ

ಮತ್ತು ಹೊಲಿಗೆಯ ಉದ್ದ 2.5 ಗೆ ಇಟ್ಟು ವೈಸ್ಟ್ ಲೈನ್ನಿಂದ ಮಡಚಿರುವುದರ ಮೇಲೆ ಹೊಲೆಯಿರಿ. ಎರದೂ ಕಡೆ ಸೀಮ್ ಗಳಲ್ಲಿ ಎರಡು ಇಂಚು ಅಂತರವಿರಲಿ.




ಕಾಲಿನ ಭಾಗದ ಹೆಮ್ಮಿಗೆ ಮುಂದುವರೆಯೋಣ, ಈಗ ಮಡಚಿರುವುದರ ಮೇಲೆ ಹೊಲೆಯಿರಿ. ಒಳ್ಳೆಯ ಕೆಲಸ, ನೀವು ನೋಡಬಹುದು ನಾವೀಗ ಮುಕ್ಕಾಲು ಭಾಗ ಮುಗಿಸಿದ್ದೇವೆ.



## ಹಂತ 5 : ಎಲಾಸ್ಟಿಕನ್ನು ಹಾಕುವುದು ಮತ್ತು ವೈಸ್ಟ್ ಲೈನನ್ನು ಹೊಲೆಯುವುದು

ಈಗ ಎಲಾಸ್ಟಿಕನ್ನು 4 ರಿಂದ 9 ವರ್ಷದ ಮಕ್ಕಳಿಗೆ 10 ಇಂಚು ಅಳತೆ ಮಾಡಿ ಮತ್ತು 10 ರಿಂದ 14 ವರ್ಷದ ಮಕ್ಕಳಿಗೆ 12 ಇಂಚು ಅಳತೆ ಮಾಡಿ ಕತ್ತರಿಸಿ. ಸೇಫ್ಟಿ ಪಿನನ್ನು ತೆಗೆದುಕೊಂಡು ಅಂಚಿನಲ್ಲಿ ಪಿನ್ ಮಾಡಿ, ಇದು ಎಲಾಸ್ಟಿಕನ್ನು ಭದ್ರವಾಗಿರಿಸಲು ಸಹಾಯವಾಗುತ್ತದೆ.




ಎಲಾಸ್ಟಿಕ್ಕನ್ನು ಹಿಂಭಾಗದಲ್ಲಿ ಹಾಕಲಾಗುತ್ತದೆ. ಇದು ನಮ್ಮ ಹಿಂಭಾಗ. ಎರಡು ಇಂಚು ಅಂತರದಲ್ಲಿ ಎಲಾಸ್ಟಿಕ್ಕನ್ನು ವೈಸ್ಟ್ ಬ್ಯಾಂಡಿನ ಒಳಕ್ಕೆ ಹಾಕಬೇಕು. ಹೀಗೆ ಮಾಡುವಾಗ ಅನ್ ಪಿನ್ ಮಾಡಿರುವ ಭಾಗ ಸೈಡ್ ಸೀಮಿನ ಮೇಲಿದೆಯೇ ಎಂದು ಖಾತ್ರಿಪಡಿಸಿಕೊಳ್ಳಿ, ಇದನ್ನ ಸರಿಯಾದ ಜಾಗದಲ್ಲಿ ಹೊಲೆಯುತ್ತಾ ಲಾಕ್ ಮಾಡಬೇಕು. ರಿವರ್ಸ್ ಹೊಲಿಗೆಯನ್ನು ಶುರುವಿನಲ್ಲಿ ಮತ್ತು ಅಂತ್ಯದಲ್ಲಿ ಹಾಕಲು ನೆನಪಿನಲ್ಲಿಡಿ. ದಾರವನ್ನು ಕತ್ತರಿಸಿ ಮತ್ತು ಎಲಾಸ್ಟಿಕನ್ನು ವೈಸ್ಟ್ ಬ್ಯಾಂಡಿನಲ್ಲಿ ಅಡ್ಜಸ್ಟ್ ಮಾಡಿ ಇನ್ನೊಂದು ಗಾಪಲ್ಲಿ ಅದನ್ನು ಎಳೆಯಿರಿ. ಸೇಫ್ಟಿ ಪಿನನ್ನು ತೆಗೆದು ವೈಸ್ಟ್ ಬ್ಯಾಂಡಿನಲ್ಲಿ ಮತ್ತೆ ಹಾಕಿ ಎಲಾಸ್ಟಿಕ್ ನ ತುದಿಯು ಸೈಡ್ ಸೀಮಿನಲ್ಲಿ ಬರುವಂತೆ ಹಾಕಿ. ಈಗ ಮೊದಲಿನಂತೆ ಹೊಲೆಯಿರಿ. ಇದು ಮುಗಿದ ನಂತರ ಎರಡು ಇಂಚು ಗಾಪನ್ನು ಮುಚ್ಚಲು ಅದರ ಮೇಲೆ ಹೊಲೆಯಿರಿ.ಇನ್ನೊಂದು ಕಡೆನೂ ಇದೇ ವಿಧಾನವನ್ನು ಪುನರಾವರ್ತಿಸಿ.





## ಹಂತ 6 : ಬಟನನ್ನು ಹೊಲೆಯುವುದು

ಕೊನೆಯ ಹಂತಕ್ಕೆ, ಶಾರ್ಟ್ಸನ್ನು ನಿಮ್ಮಿಷ್ಟದಂತೆ ಅಲಂಕರಿಸಿ. ನಾವು ಕೆಲವು ಮಷೀನ್ ಬಟನನ್ನು ಬಳಸಿದ್ದೇವೆ. **www.ushasew.com** ಗೆ ಹೋಗಿ ಬಟನನ್ನು ಹೇಗೆ ಹೊಲೆಯಬೇಕು ಮತ್ತು ಹೇಗೆ ಅಲಂಕರಿಸಬಹುದು ಎಂದು ವಿವರಣೆಯನ್ನು ಪಡೆಯಬಹುದು.



ಇದು ತುಂಬಾ ಮುದ್ದಾಗಿ ಮತ್ತು ಸ್ಟೈಲಿಷಾಗಿ ಕಾಣುತ್ತಿದೆ ಅಲ್ವಾ? ನಿಮ್ಮ ಸ್ನೇಹಿತರು ಮತ್ತು ಇತರೆ ಪೋಷಕರು ನಿಮ್ಮ ಮೊಗುವಿನ ಸ್ಟೈಲನ್ನು ನೋಡಿ ಮೆಚ್ಚಿಕೊಳ್ಳುತ್ತಾರೆ. ಕೆಳಗಿನ ಕಮೆಂಟ್ ಸೆಕ್ಷನಲ್ಲಿ ನಿಮಗೆ ಹೇಗೆ ಅನಿಸುತ್ತಿದೆ ಎಂದು ನಮಗೆ ತಿಳಿಸಿ.

